ಮೃತದೇಹ ೨೦ ೨-೧೯೮೭ ರಂದು ಆರೆಸುಟ್ಟ ಪರಿಸ್ಥಿತಿಯಲ್ಲಿ ಸದ್ರಿ ವಿದ್ಯಾಸಂಸ್ಥೆಯ ಆವರಣದಲ್ಲಿ ಸಿಕ್ಕಿದೆ.

ಆನಂತರದ ಬೆಳವಣಿಗೆಯಂತೆ ಮೃತದೇಹದ ಮರಣೋತ್ತರ, ಸಾವಿನ ಬಗ್ಗೆ ಸಂಶಯ ಕೊಲೆ ಇತ್ಯಾದಿ ಆರೋಪಗಳು ಅನುಮಾನದ ಬಂಧನಗಳು ಇತ್ಯಾದಿಗಳೆಲ್ಲದೆ ಪ್ರತಿಭಟಿಸಿದ ವಿದ್ಯಾರ್ಥಿಗಳ ಮೇಲೆ ಆಸಿಡ್ ಎಸೆತ, ವಿದ್ಯಾರ್ಥಿ ಸಂಸ್ಥೆಗೆ ಜಖಂ ಮುಂತಾಗಿ ಹಲವಾರು ತಿರುವುಗಳನ್ನು ಪಡೆದು ಸಂಪೂರ್ಣ ಘಟನೆ ಒಂದು ಗೊಂದಲ ರೂಪ ತಳೆದಿದೆ.

ವಿದ್ಯಾರ್ಥಿಗಳು, ನಾಗರೀಕರು, ಸ್ಥಳೀಯ ಮುಖಂಡರು ಪೋಲೀಸ್ ಇಲಾಖೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಸಿ.ಒ.ಡಿ. ತನಿಖೆಗೆ ಒತ್ತಾಯಿಸಿದ್ದಾರೆ. ಜಿಲ್ಲಾ ಪೋಲೀಸ್ ಅಧಿಕಾರಿಗಳು ವಿವರಣಾತ್ಮಕ ಹೇಳಿಕೆ ನೀಡಿ, ನಿಸ್ಪಕ್ಷಪಾತವಾದ ತನಿಖೆಗೆ ಭರವಸೆ ನೀಡಿದ್ದಾರೆ ಮಾತ್ರವಲ್ಲದೆ ಇನ್ನೂ ಸಮಾಧಾನವಾಗದಿದ್ದಲ್ಲಿ ಸಿ.ಒ.ಡಿ. ತನಿಖೆಯಾದರೂ ತನ್ನ ಅಭ್ಯಂತರವಿಲ್ಲ ಎಂದಿದ್ದಾರೆ.

ಸತ್ಯಾಂಶ ಏನೆಂದೇ ತಿಳಿಯದೆ ಜಿಲ್ಲೆಯಾದ್ಯಂತ ಜನರು ಕುತೂಹಲಿಗಳಾಗಿರುವ ಸಂದರ್ಭದಲ್ಲಿ ಎಲ್ಲದಕ್ಕೂ ಸಿ.ಒ.ಡಿ. ತನಿಖೆಯೇ ಸಮಂಜಸ ಎನ್ನುವ ಸಾಮಾನ್ಯ ಭಾವನೆ ಮೂಡಿರುವ ವಾತಾವರಣವನ್ನು ತಿಳಿಗೊಳಿಸುವ ಸಲುವಾಗಿ ಸರ್ಕಾರ ಪೂರ್ಣ ಘಟನೆಯನ್ನು ಸಿ.ಒ.ಡಿ. ತನಿಖೆಗೆ ಒಪ್ಪಿಸಿ,ನಿಸ್ಪಕ್ಷಪಾತ ತನಿಖೆಗೆ ಅವಕಾಶ ಕಲ್ಪಿಸಬೇಕಾಗಿ ಅತ್ಯಂತ ಕಳಕಳಿಯಿಂದ ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು) —ಮಾನ್ಯ ಅಧ್ಯಕ್ಷರೇ, ನಾನಂ ಈ ಬಗ್ಗೆ ಪೂರ್ಣವಾದ ವಿವರಗಳನ್ನು ತರಿಸಿದ್ದೇನೆ. ಇದರ ಪ್ರಕಾರ ಇದಂ ಸಿ.ಒ.ಡಿ. ತನಿಖೆಗೆ ಸೂಕ್ತವಾಗಿದೆ ಎಂದು ನಾನಂ ಒಪ್ಪಿಕೊಳ್ಳುತ್ತಿದ್ದೇನೆ.

(12) ಕೊಡಗಂ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಏಲಕ್ಕಿ ಬೆಳೆಗೆ ಕಟ್ಟೆ ರೋಗ ಬಂದಿರುವುದಂ

ಶ್ರೀ ಡಿ.ಎ. ಚಿನ್ನಪ್ಪ,—ಮಾನ್ಯ ಅಧ್ಯಕ್ಷರೇ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಈಗ ಸುಮಾರು ೨೦ ವರ್ಷಗಳಿಂದ ಏಲಕ್ಕಿ ಬೆಳೆಗೆ ಕಟ್ಟೆ ರೋಗ ಬಂದು ಎಲ್ಲಾ ಏಲಕ್ಕಿ ತೋಟಗಳೂ ಈಗ ಬಂಜರಾಗಿವೆ. ಈ ರೋಗದ ನಿವಾರಣೆಗಾಗಿ ಸರ್ಕಾರಕ್ಕೆ ಎಷ್ಟು ಪುನವಿಯನ್ನು ಸಲ್ಲಿಸಿದ್ದಾಗ್ಯೂ ಸರ್ಕಾರ ಹಾಗೂ ಏಲಕ್ಕಿ ಮಂಡಲಿ ಈ ರೋಗದ ಬಗ್ಗೆ ಯಾವ ಗಮನವನ್ನೂ ಹರಿಸಿರುವುದಿಲ್ಲ.ಅಲ್ಲದೆ ಇವರು ಮಲತಾಯಿ ಧೋರಣೆ ತಾಳಿದ್ದಾರೆ ಇದರಿಂದಾಗಿ ಏಲಕ್ಕಿ ಬೆಳೆಗಾರರು ತಮ್ಮ ಜೀವನೋಪಾಯವನ್ನು ನಡೆಸಲಾಗದೆ ಬಹಳ ಕಷ್ಟಪಡುತ್ತಿದ್ದಾರೆ. ಅವರು ಪಡೆಕೊಂಡಂತಹ ಸಾಲವನ್ನು ಮರುಪಾವತಿ ಮಾಡಲಾರದೆ ಈ ದಿನ ಅವರ ಆಸ್ತಿಪಾಸ್ತಿಗಳನ್ನು ಸರ್ಕಾರದವರು ಜಪ್ತಿ ಮಾಡಿ ಹರಾಜು ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟಲು ಹಾಗೂ ಬಡವರ ಕಷ್ಟನಷ್ಟಗಳನ್ನು ನಿವಾರಿಸಲು ತುರ್ತು ಸೂಕ್ತ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಸಚಿವರ ಪರವಾಗಿ ನಾನಂ ಇದಕ್ಕೆ ಉತ್ತರ ಕೊಡುತ್ತಿದ್ದೇನೆ.

ಕಟ್ಟೆ ರೋಗವು ಒಂದು ಬಗೆಯ ನಂಜು ರೋಗ. ಈ ರೋಗವು ನಮ್ಮ ದೇಶದಲ್ಲಿ ಸುಮಾರು ೧೯೦೦ನೇ ಇಸವಿಯಿಂದ ಕಾಣಿಸಿಕೊಂಡಿದೆ ಎಂಬ ವರದಿ ಇದೆ. ದಕ್ಷಿಣಭಾರತದ ಸಾಮಾನ್ಯ ಎಲ್ಲಾ ಏಲಕ್ಕಿ ತೋಟಗಳಲ್ಲಿಯೂ ಈ ರೋಗವು ಹರಡಿದೆ. ರೋಗವು ಎಲ್ಲಾ ವಯಸ್ಸಿನ ಗಿಡಗಳಿಗೂ ತಗಲಬಹುದು.ತೋಟದಿಂದ ತೋಟಕ್ಕೆ ರೋಗದ ಉಲ್ಬಣತೆಯ ಪ್ರಮಾಣವು ವ್ಯತ್ಯಾಸ ಹೊಂದಿರಬಹುದು ವಿಶವು ಬನಾನಾ ಎಫಿಡ್ ಎಂಬ ವಾಹಕ ಕೀಟಗಳ ಮೂಲಕ ರೋಗ ಬಂದ ಗಿಡಗಳಿಂದ ಆರೋಗ್ಯವಂತ ಗಿಡಗಳಿಗೆ ಹರಡುವುದಂ. ಈ ರೋಗವು ಉಲ್ಬಣಗೊಂಡಂತೆ ಗಿಡಗಳಿಂದ ದೊರಕುವ ಫಸಲು ಕಾಗ್ಗುತ್ತಾ ಹೋಗುವುದು.

ಈ ರೋಗದ ಹತೋಟಿ ಬಗ್ಗೆ ಸಂಶೋಧನೆಯನ್ನು ಬೆಂಗಳೂರು ವ್ಯವಸಾಯ ವಿಶ್ವವಿದ್ಯಾನಿಲಯದ ಮೂಡಿಗೆರೆ ಕೇಂದ್ರದಲ್ಲಿಯೂ, ಕೇಂದ್ರ ತೋಟಗಾರಿಕಾ ಸಂಶೋಧನಾ ಕೇಂದ್ರ, ಅಪ್ಪಂಗಲ

ಹಾಗೂ ಏಲಕ್ಕಿ ಅಭಿವೃದ್ಧಿ ಮಂಡಳಿಗಳು ಕೈಗೊಂಡಿರುತ್ತವೆ. ಇದುವರೆಗೆ ದೊರೆತಿರುವ ಸಂಶೋಧನಾ ಫಲಿತಾಂಶಗಳ ಪ್ರಕಾರ ಈ ರೋಗವನ್ನು ತಡೆಗಟ್ಟಲು ಮುಖ್ಯವಾಗಿ ಕೈಗೊಳ್ಳಬೇಕಾದಂಥ ಹತೋಟಿ ಕಾರ್ಯಕ್ರಮಗಳಿಂದರೆ.—

೧) ಬೀಜದಿಂದ ಉತ್ಪಾದಿಸಿದ ಗುಣಮಟ್ಟದ ಗಿಡಗಳನ್ನು ನೆಡಲು ಉಪಯೋಗಿಸುವುದು.

೨) ಏಲಕ್ಕಿ ಒಟ್ಟಲು ಪಾತಿ ಮಾಡುವಾಗ ಕಟ್ಟೆ ರೋಗವಿರುವ ತೋಟದಿಂದ ದೂರವಾಗಿ ಮಾಡ ತಕ್ಕದ್ದು.

೩) ರೋಗವಿರುವ ತೋಟದಿಂದ ಗಿಡಗಳನ್ನು ತಂದು ನೆಡಬಾರದು

೪) ಆಗಿಂದಾಗ್ಗೆ (ತಿಂಗಳಿಗೊಮ್ಮೆ) ತೋಟದಲ್ಲಿ ಕಟ್ಟೆ ರೋಗದ ಬಗ್ಗೆ ಗಿಡಗಳನ್ನು ಪರಿಶೀಲಿಸುವುದು.

೫) ಕಟ್ಟೆ ತಗಲಿದ ಗಿಡಗಳನ್ನು ಬುಡದಿಂದ ಕತ್ತರಿಸಿ ಎಚ್ಚರಿಕೆಯಿಂದ ನೆಲದ ಮೇಲೆ ಆಲುಗಾಡದಂತೆ ಒಣಗಲು ಇಡಬೇಕು. ಒಣಗಿದ ನಂತರ ಈ ಗಿಡವನ್ನು ಹೊರಗಡೆ ತೆಗೆದು ಸುಡುವುದು ಅಥವಾ ಹೂಳುವುದು ಒಳ್ಳೆಯದು.

೬) ಖಾಲಿಯಾದ ಜಾಗದಲ್ಲಿ ಆರೋಗ್ಯವಂತ ಗಿಡಗಳನ್ನು ಹಾಕುವುದಂ

೭) ವಾಹಕ ಕೀಟಗಳಿಂದ ರಕ್ಷಣೆ ಪಡೆಯಲು ಕಾಲ ಕಾಲಕ್ಕೆ ಗೊತ್ತಾದ ಕೀಟ ನಾಶಕವನ್ನು ಸಿಂಪಡಿಸುತ್ತಿರಬೇಕು.

೮) ಈ ರೋಗದ ನಿಯಂತ್ರಣದ ಬಗ್ಗೆ ರೈತರಿಗೆ ಅರಿವು ನೀಡಲು ಕೇಂದ್ರ ತೋಟಗಳ ಸಂಶೋಧನಾಲಯ ಅಪ್ಪಂಗಲ ಇಲ್ಲಿ ರೈತರಿಗೆ ತರಬೇತಿ ಕಾರ್ಯಕ್ರಮವನ್ನು ಸಹ ಏರ್ಪಡಿಸಲಾಗಿದೆ.

೧-೩೦ ಪಿ. ಯಂ.

ಕಟ್ಟೆ ರೋಗ ನಿರೋಧಕ ತಳಿಗಳನ್ನು ಕಂಡು ಹಿಡಿಯುವ ಬಗ್ಗೆಯೂ ಸಹ ಸಂಶೋಧನಾ ಕೇಂದ್ರಗಳು ಈಗಾಗಲೇ ಪ್ರಯತ್ನ ನಡೆಸಿರುತ್ತದೆ. ಸದ್ಯದಲ್ಲಿಯೇ ಈ ಬಗ್ಗೆ ಅವರು ಯಶಸ್ಸನ್ನು ಸಾಧಿಸುವ ಆಶಾಭಾವನೆ ಇದೆ.

ಇತ್ತೀಚಿನ ವರ್ಷಗಳಲ್ಲಿ ಮಳೆ ಕಡಿಮೆಯಾಗಿ ಹಾಗೂ ಅರಣ್ಯ ನಾಶ ಹೆಚ್ಚಾಗಿ ಉಷ್ಣಾಂಶ ಜಾಸ್ತಿಯಾಗುತ್ತಿರುವುದರಿಂದ ವಾತಾವರಣ ಏಲಕ್ಕಿ ತೋಟಗಳ ಮೇಲೆ ಸ್ವಲ್ಪ ಪರಿಣಾಮ ಬೀರುತ್ತಿದೆ. ೧೯೭೮—೭೯ ರಲ್ಲಿ, ೨೮,೨೫೩ ಹೆಕ್ಟೇರ್‌ಗಳಲ್ಲಿ ಇದ್ದಂತಹ ಏಲಕ್ಕಿ ಬೆಳೆ, ೧೯೮೧—೮೧ಕ್ಕೆ ೪೮, ೮೫೫ಕ್ಕೆ ಏರಿದ್ದು, ಈಗಿನ ಬರಗಾಲದಿಂದಾಗಿ ೧೯೮೨-೮೩ ರಲ್ಲಿ ೨೯,೮೨೬ ಹೆಕ್ಟೇರಿಗೆ ಇಳಿದು ಹೋಯಿತು. ಆದ್ದರಿಂದ ಏಲಕ್ಕಿಯ ಬೆಳೆ ಕ್ಷೀಣಿಸುತ್ತಿರುವುದಕ್ಕೆ ಕಟ್ಟೆ ರೋಗ ಮಾತ್ರವಲ್ಲದೆ ಪರಿಸರ ಬದಲಾವಣೆಗಳು ಕೂಡ ಸಾಕಷ್ಟು ಕಾರಣವಾಗಿದೆ.

ಏಲಕ್ಕಿ ಬೆಳೆಯ ಅಭಿವೃದ್ಧಿಗೋಸ್ಕರ ತೋಟಗಾರಿಕೆ ಇಲಾಖೆ ಹಾಗೂ ಏಲಕ್ಕಿ ಅಭಿವೃದ್ಧಿ ಮಂಡಲಿ ಕೆಲವೊಂದು ಕಾರ್ಯಕ್ರಮಗಳನ್ನು ಈಗಾಗಲೇ ಹಾಕಿಕೊಂಡಿದ್ದು ರೈತರಿಗೆ ಸಹಾಯ ಒದಗಿಸುತ್ತಿದೆ. ಉತ್ತಮ ಗುಣಮಟ್ಟದ ಗಿಡಗಳನ್ನು ಒದಗಿಸುವುದು ಅಲ್ಲದೆ ತೋಟಗಳಿಗೆ ಹನಿ ನೀರಾವರಿ ಸೌಕರ್ಯ ಕಲ್ಪಿಸಿಕೊಳ್ಳಲು ಹಾಗೂ ಕಟ್ಟೆ ಪೀಡಿತ ತೋಟಗಳ ಪುನರುಜ್ಜೀವನ ಮಾಡಲು, ರೋಗ ರುಜಿನಗಳಿಂದ ಬೆಳೆಯನ್ನು ತಡೆಗಟ್ಟಲು ಬೇಕಾದ ಸಿಂಪರಣಾ ಔಷಧಿಗಳನ್ನು ಪಡೆದುಕೊಳ್ಳಲು ಸಹಾಯಧನವನ್ನು ಹಾಗೂ ಸಾಲವನ್ನು ಏಲಕ್ಕಿ ಮಂಡಲಿ ಒದಗಿಸಿಕೊಡುತ್ತಿದೆ.

ಏಲಕ್ಕಿ ತೋಟಗಳ ಅಭಿವೃದ್ಧಿಗೆ ವಿವಿಧ ವಾಣಿಜ್ಯ ಬ್ಯಾಂಕುಗಳು, ಹಣಕಾಸು ಸ್ಥಾಂಸೆಗಳು ನೆರವು ನೀಡುತ್ತಿದ್ದು, ಅವುಗಳ ಮೂರು ಪಾವತಿಯನ್ನು ನಿಯಮದ ಪರಿಮಿತಿಯೊಳಗೆ ಮಾಡಲಾಗುತ್ತಿದೆ.